

# ಬೆಡಗು-ಬೆರಗಿನ ಸಹಪಯಣ

**ನಾಗಾಭರಣ ನಿರ್ದೇಶನದ 'ಅಲ್ಲಮ' ಕನ್ನಡದ ಸಾಂಸ್ಕೃತಿಕ-ಆಧ್ಯಾತ್ಮಿಕ ಕ್ಷೇತ್ರದ ಮಹಾನ್ ಪ್ರತಿಭೆಯನ್ನು ದೃಶ್ಯಮಾಧ್ಯಮಕ್ಕೆ ಪರಿಚಯಿಸುತ್ತಿರುವ ವಿಶಿಷ್ಟ ಪ್ರಯತ್ನ. ಬೆಡಗಿನ ಅಲ್ಲಮ ಚಿತ್ರರಸಿಕರು ಬೆರಗುಗೊಳ್ಳುವಂತೆ ಸಿನಿಮಾದಲ್ಲಿ ಮೂಡಿದ್ದಾನಂತೆ.**

ವಿಶ್ವ ಇತಿಹಾಸದ ಅಪೂರ್ವ ಅಧ್ಯಾಯಗಳಲ್ಲಿ ಒಂದಾದ ಹನ್ನೆರಡನೇ ಶತಮಾನದ 'ಅನುಭವ ಮಂಟಪದ' ಕೇಂದ್ರಬಿಂದು ಅಲ್ಲಮಪ್ರಭು. ಈ ಗುರುವಿನ ಬದುಕು–ದರ್ಶನ ಒಳಗೊಂಡ 'ಅಲ್ಲಮ' ಸಿನಿಮಾ ಈಗ (ಜ. 26ರಂದು) ತೆರೆ ಕಾಣುತ್ತಿದೆ.

'ಅಲ್ಲಮ' ಟಿ.ಎಸ್. ನಾಗಾಭರಣ ಅವರ ಮಹತ್ವಾಕಾಂಕ್ಷೆಯ ಸಿನಿಮಾ. ಶಿಶುನಾಳ ಶರೀಫರಂಥ ಅನುಭಾವಿಯನ್ನು ದೃಶ್ಯ ಮಾಧ್ಯಮದ ಮೂಲಕ ಕಟ್ಟಿಕೊಟ್ಟಿದ್ದ ಅವರೀಗ, ಅಲ್ಲಮಪ್ರಭುವನ್ನು ದೃಶ್ಯರೂಪಕ್ಕೆ ತಂದಿದ್ದಾರೆ. ಕಥೆ–ಚಿತ್ರಕಥೆಯೂ ಅವರದೇ.

ಕನ್ನಡದ ಸಾಂಸ್ಕೃತಿಕ ಲೋಕ ಕಂಡ ಮಹಾನ್ ಅನುಭಾವಿಯನ್ನು ಸಿನಿಮಾಕ್ಕೆ ಅಳವಡಿಸುವುದು ನಾಗಾಭರಣರ ಬಹುಕಾಲದ ಕನಸು. ಈ ಹಂಬಲವನ್ನು ಪೋಷಿಸಿದವರು ಉದ್ಯಮಿ ಶ್ರೀಹರಿ ಖೋಡೆ. ಇತ್ತೀಚೆಗಷ್ಟೇ ಅಗಲಿದ ಖೋಡೆ ಅವರ ಕೊಡುಗೆಯ ರೂಪದಲ್ಲೂ 'ಅಲ್ಲಮ' ಚಿತ್ರವನ್ನು ನೋಡಬೇಕಿದೆ. ಈ ಚಿತ್ರ ಗೋವಾ ಚಿತ್ರೋತ್ಸವದ 'ಪನೋರಮಾ' ವಿಭಾಗದಲ್ಲಿ ಪ್ರದರ್ಶನ ಕಂಡಿದೆ.



ಬೆಡಗಿನ ವಚನಗಳ ಅಲ್ಲಮ ಜನಸಾಮಾನ್ಯರ ಪಾಲಿಗೆ ಕಬ್ಬಿಣದ ಕಡಲೆ. ಆ ಕಾರಣದಿಂದಲೇ ಪ್ರಭುವನ್ನು ಕೊಂಚ ಜನಪ್ರಿಯವಾಗಿ ಹೇಳಲು ನಾಗಾಭರಣ ಪ್ರಯತ್ನಿಸಿದ್ದಾರಂತೆ. ಅಲ್ಲಮನ ಪ್ರೇಮಿ ಮಾಯಾದೇವಿಗೂ ಚಿತ್ರದಲ್ಲಿ ಪ್ರಮುಖ ಪಾತ್ರವಿದೆ. ಮಾಯೆಯ ಪಾತ್ರದಲ್ಲಿ ಮೇಘನಾ ರಾಜ್ ನಟಿಸಿದ್ದಾರೆ. ಈ ಪಾತ್ರ ಮೇಘನಾ ಪಾಲಿಗೆ ಬಣ್ಣದ ಬದುಕಿನ ಅಪೂರ್ವ ಅನುಭವಗಳಲ್ಲೊಂದು. ಈವರೆಗೆ ತಾವು ಕನವರಿಸುತ್ತಿದ್ದ ಪಾತ್ರ ಮಾಯೆಯ ಮೂಲಕ ದೊರೆತಿದೆ ಎನ್ನುವ ಅನಿಸಿಕೆ ಅವರದು.

ಯುವ ನಟ ಧನಂಜಯ್ ಅಲ್ಲಮಪ್ರಭುವಿನ ಪಾತ್ರದಲ್ಲಿ ನಟಿಸಿದ್ದಾರೆ. ಅಲ್ಲಮನನ್ನು ಆವಾಹಿಸಿಕೊಳ್ಳಲು ಸಾಕಷ್ಟು ಸಿದ್ಧತೆ ನಡೆಸಿರುವ ಅವರು, ಮದ್ದಲೆಯ ಪ್ರಾಥಮಿಕ ಪಾಠಗಳನ್ನೂ ಸಿನಿಮಾಕ್ಕಾಗಿ ಕಲಿತಿದ್ದಾರೆ. ಈವರೆಗೆ ಕಮರ್ಷಿಯಲ್ ಕಥನಗಳಲ್ಲಿ ನಟಿಸಿರುವ ಅವರಿಗೆ, ಅಲ್ಲಮನ ಪಾತ್ರ ಕಲಾವಿದನಾಗಿ ದೊರೆತ ಬಡ್ತಿಯಂತಿದೆ. ಲಕ್ಷ್ಮೀ ಗೋಪಾಲಸ್ವಾಮಿ ಅವರು ತಾಯಿಯ ಪಾತ್ರದಲ್ಲಿ ಹಾಗೂ ಬಸವಣ್ಣನ ಪಾತ್ರದಲ್ಲಿ ಸಂಚಾರಿ ವಿಜಯ್ ನಟಿಸಿದ್ದಾರೆ.

ಶರಣರ ಕಾಲದ ಪರಿಸರವನ್ನು ಮರು ಸೃಷ್ಟಿಸಲು ಭರಣರು ಕಲೆ ಹಾಕಿರುವ ತಂಡ ಕಲೆ ಹಾಕಿದೆ. ಪ್ರಯೋಗಶೀಲ ಚಿತ್ರಗಳಲ್ಲಿ ಜೀವಜಲದಂತೆ ತೊಡಗಿಕೊಳ್ಳುವ ಹಿರಿಯ ಸಿನೆಮಾಟೊಗ್ರಫರ್ ಜಿ.ಎಸ್. ಭಾಸ್ಕರ್ 'ಅಲ್ಲಮ' ಚಿತ್ರದ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಕಲಾ ನಿರ್ದೇಶನ ಶಶಿಧರ ಅಡಪ ಅವರದು. ಭಾಸ್ಕರ್ ಹಾಗೂ ಅಡಪರ ಜುಗಲಬಂದಿ ಹನ್ನೆರಡನೇ ಶತಮಾನದ ಪ್ರಭೆಯನ್ನು ಆಧುನಿಕ ಕಾಲಘಟ್ಟದಲ್ಲಿ ಹಿಡಿದಿಡಲು ಪ್ರಯತ್ನಿಸಿದೆ. ಇವರ ಜೊತೆಗೆ ಪ್ರಸಿದ್ಧ ಕೊಳಲು ವಿದ್ವಾಂಸ ಬಾಪು ಪದ್ಮನಾಭ ಅವರ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಅಲ್ಲಮನ ವಚನಗಳೊಂದಿಗೆ ಬಸವಣ್ಣ, ಅಕ್ಕಮಹಾದೇವಿ ಅವರ ವಚನಗಳನ್ನೂ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆಯಂತೆ.

■ ರಘು